# ವಸಂತನ ನಕಲು ಮಾಡುವುದುಂಟೆ?

**ರಾಜ್‌ಕುಮಾರ್ ಸಿನಿಮಾಗಳ ಶೀರ್ಷಿಕೆಯನ್ನು ಹೊಸ ಚಿತ್ರಗಳಿಗೆ ಬಳಸಲಾಗುತ್ತಿದೆ. ಹೆಸರಿನ ಜನಪ್ರಿಯತೆಗೆ ಜೋತುಬೀಳುವ ನಿರ್ಮಾಪಕ, ನಿರ್ದೇಶಕರಿಗೆ ಮೂಲಚಿತ್ರಗಳಲ್ಲಿನ ಆಶಯದ ಬಗ್ಗೆ ಮಾತ್ರ ದಿವ್ಯ ನಿರ್ಲಕ್ಷ್ಯ**

■ ರಘು



‘ವಸಂತ ಮಾಸ ಬಂದಾಗ ಮಾವು ಚಿಗುರಲೇ ಬೇಕು, ಕೋಗಿಲೆ ಹಾಡಲೇಬೇಕು’ ಎನ್ನುವುದು ರಾಜ್‌ಕುಮಾರ್ ಧ್ವನಿಯಲ್ಲಿ ಮೂಡಿಬಂದಿರುವ ಇಂಪಾದ ಹಾಡುಗಳಲ್ಲೊಂದು. ವಸಂತ ಮತ್ತು ಮಾಮರದ ಈ ಸಂಬಂಧದ ಜೊತೆ ರಾಜ್‌ಕುಮಾರ್ ಅವರನ್ನೂ ಸೇರಿಸಿಕೊಳ್ಳಬೇಕು. ವಸಂತ–ಚೈತ್ರದ ಏಪ್ರಿಲ್ ತಿಂಗಳು ಬಂದಾಗ ರಾಜ್ ಅವರನ್ನು ನೆನಪಿಸಿಕೊಳ್ಳಲೇಬೇಕು!

ಕನ್ನಡ ಚಿತ್ರರಂಗದ ಪಾಲಿಗೆ ಏಪ್ರಿಲ್ 'ರಾಜ್ ಮಾಸ'. ವರನಟನ ಹುಟ್ಟಿದಹಬ್ಬ (ಏ. 24) ಹಾಗೂ ನಿಧನ (ಏ.12) ಎರಡೂ ಈ ತಿಂಗಳಲ್ಲೇ. ಅಭಿಮಾನಿಗಳ ಪಾಲಿಗೆ ಸಂತಸ ಹಾಗೂ ಸಂಕಟ ಎರಡೂ ಒಮ್ಮೆಗೇ. ಹೀಗೆಂದು ರಾಜ್ ನೆನಪು ಏಪ್ರಿಲ್‌ಗೆ ಮಾತ್ರ ಸೀಮಿತವೆಂದಲ್ಲ. ಚಿತ್ರರಸಿಕರ ಪಾಲಿಗೆ ರಾಜ್ ಸಿನಿಮಾಗಳು ಜೀವನಪೂರ್ತಿ ಒದಗಿಬರುವ ರಸಕವಳ. ಚಿತ್ರೋದ್ಯಮ ಕೂಡ ರಾಜ್ ಅವರನ್ನು ನೆನಪಿಸಿಕೊಳ್ಳುವುದಿದೆ. ಆದರೆ, ಈ ನೆನಪು ಬಹುತೇಕ ಸಂದರ್ಭಗಳಲ್ಲಿ ವ್ಯಾಪಾರಿ ಮನೋಭಾವದಿಂದಲೇ ಕೂಡಿರುತ್ತದೆ ಎನ್ನುವುದನ್ನು ಮರೆಯಬಾರದು.

ಚಿತ್ರೋದ್ಯಮ ರಾಜ್‌ಕುಮಾರ್ ಅವರನ್ನು ಎರಡು ರೀತಿಗಳಲ್ಲಿ ನೆನಪಿಸಿಕೊಳ್ಳುತ್ತದೆ. ಮೊದಲನೆಯದು, ಚಿತ್ರಕಥೆಯಲ್ಲಿ ಒಂದಲ್ಲಾ ಒಂದು ಬಗೆಯಲ್ಲಿ ರಾಜ್ ಹೆಸರನ್ನು ತರುವುದು. ರಾಜ್ ಬಿಂಬ ಕಾಣಿಸಿದ ಕೂಡಲೇ, ಇಲ್ಲವೇ ಧ್ವನಿ ಕೇಳಿಸಿದ ಕೂಡಲೇ ಚಿತ್ರಮಂದಿರಗಳಲ್ಲಿ ಸಿಳ್ಳೆ ಕೇಳಿಸುತ್ತದೆ. ಈ ಸಿದ್ಧಸೂತ್ರಗಳ ಜೊತೆಗೆ, 'ಒಂದು ಮೊಟ್ಟೆಯ ಕಥೆ' ಚಿತ್ರದಲ್ಲಿ ರಾಜ್ ಒಂದು ರೂಪಕದಂತೆ ಅರ್ಥಪೂರ್ಣವಾಗಿ ಬಳಕೆಯಾದುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

ರಾಜ್ ಸಿನಿಮಾಗಳ ಶೀರ್ಷಿಕೆಗಳನ್ನು ಹೊಸ ಚಿತ್ರಗಳಿಗೆ ಬಳಸಿಕೊಳ್ಳುವುದು ರಾಜ್ ಸ್ಮರಣೆಯ ಮತ್ತೊಂದು ದಾರಿ. ಇದು ಕೂಡ ವ್ಯಾಪಾರಿ ತಂತ್ರವೇ. ಇತ್ತೀಚೆಗೆ ತೆರೆಕಂಡ ಕೆಲವು ಸಿನಿಮಾಗಳ ಹೆಸರುಗಳನ್ನು ನೆನಪಿಸಿಕೊಳ್ಳಿ: 'ಬಂಗಾರ ಸನ್ ಆಫ್ ಬಂಗಾರದ ಮನುಷ್ಯ','ಶ್ರೀನಿವಾಸ ಕಲ್ಯಾಣ', 'ಎರಡು ಕನಸು',' ಸತ್ಯ ಹರಿಶ್ಚಂದ್ರ' – ಇವೆಲ್ಲವೂ ರಾಜ್ ನಟನೆಯ ಜನಪ್ರಿಯ ಚಿತ್ರಗಳು. ಇವುಗಳ ಸಾಲಿಗೆ, ಚಿತ್ರೀಕರಣ ನಡೆಯುತ್ತಿರುವ ಪುನೀತ್ ನಟನೆಯ 'ನಟಸಾರ್ವಭೌಮ' ಕೂಡ ಸೇರುತ್ತದೆ.

ಜನರ ಮನಸ್ಸಿನಲ್ಲಿ ಈಗಾಗಲೇ ನೆಲೆ ನಿಂತಿರುವ ರಾಜ್ ಸಿನಿಮಾಗಳ ಹೆಸರುಗಳನ್ನು ಮತ್ತೆ ಬಳಸಿಕೊಳ್ಳುವುದು ಪ್ರೇಕ್ಷಕರನ್ನು ಸೆಳೆಯುವ ತಂತ್ರಗಳಲ್ಲೊಂದು. ಆದರೆ, ಇಲ್ಲೊಂದು ಸೂಕ್ಷ್ಮವಿದೆ. ಹೀಗೆ ತಯಾರಾಗುವ ಬಹುತೇಕ ಚಿತ್ರಗಳಲ್ಲಿ ಮೂಲಚಿತ್ರದ ಆಶಯ, ಸೊಗಡು ಕಾಣಿಸುವುದಿಲ್ಲ. 'ಸನ್ ಆಫ್ ಬಂಗಾರದ ಮನುಷ್ಯ' ಚಿತ್ರವನ್ನೇ ನೋಡಿ. ಮೂಲಚಿತ್ರದಲ್ಲಿನ ಗ್ರಾಮೀಣ ಸೊಗಡು ಇಲ್ಲಿ ನಾಪತ್ತೆಯಾಗಿದೆ. ರಾಜ್‌ರ 'ಎರಡು ಕನಸು' ಕನ್ನಡದ ಸೂಪರ್‌ಹಿಟ್ ಪ್ರೇಮಕಥನಗಳಲ್ಲೊಂದು. ಆ ಚಿತ್ರದೊಂದಿಗೆ ಈ ಹೊತ್ತಿನ ಕನಸನ್ನು ಹೇಗೆ ಸಮೀಕರಿಸುವುದು? ಇನ್ನು ಹುಣಸೂರರ 'ಸತ್ಯಹರಿಶ್ಚಂದ್ರ'ನಿಗೂ ದಯಾಳ್ ಪದ್ಮನಾಭ್‌ರ ಹರಿಶ್ಚಂದ್ರನಿಗೂ ಸಂಬಂಧ ಹುಡುಕುವುದೇ ಅಸಂಗತ ಎನ್ನುವಂತಿದೆ.

ಇದ್ದುದರಲ್ಲಿ ಪುನೀತ್ ನಟನೆಯ, ಸಂತೋಷ್ ಆನಂದರಾಮ್ ನಿರ್ದೇಶನದ 'ರಾಜ್‌ಕುಮಾರ' ಚಿತ್ರವೇ ವಾಸಿ. ರಾಜ್ ವ್ಯಕ್ತಿತ್ವ ಹಾಗೂ ಸಿನಿಮಾಗಳ ಉದಾತ್ತತೆಯನ್ನು ಬಿಂಬಿಸುವ ಪ್ರಯತ್ನ ಈ ಚಿತ್ರದಲ್ಲೂ ಇತ್ತು. “ವಿಷ್ಣುವರ್ಧನ' ಎಂದು ಹೆಸರಿಟ್ಟು ಚೋರಕಥೆಯನ್ನು ಹೇಳಿದ ವಿಪರ್ಯಾಸ 'ರಾಜ್‌ಕುಮಾರ' ಸಂದರ್ಭದಲ್ಲಿ ಪುನರಾವರ್ತನೆಯಾಗಲಿಲ್ಲ.

ಹಳೆಯ ಚಿತ್ರದ ಶೀರ್ಷಿಕೆಯನ್ನು ಹೊಸ ಸಿನಿಮಾಕ್ಕೆ ಬಳಸಿಕೊಳ್ಳುವ ನಿರ್ಮಾಪಕ, ನಿರ್ದೇಶಕರು ಮೂಲಚಿತ್ರದ ಘನತೆಯನ್ನು ರಕ್ಷಿಸುವ ಜವಾಬ್ದಾರಿಯನ್ನೂ ಹೊರಬೇಕಾಗುತ್ತದೆ. ರಾಜ್‌ಕುಮಾರ್ ಸಿನಿಮಾದ ಹೆಸರುಗಳು ಕೇವಲ ಶೀರ್ಷಿಕೆಗಳಲ್ಲ; ಅವು ಸಹೃದಯರ ಸಂವೇದನೆಗಳೊಂದಿಗೆ ಬೆಸೆದುಕೊಂಡಿರುವ ಸಾಂಸ್ಕೃತಿಕ ಸಂಗತಿಗಳು ಎನ್ನುವುದನ್ನು ಈ ಹೊತ್ತಿನ ಚಿತ್ರನಿರ್ಮಾತೃಗಳಿಗೆ ಅರ್ಥ ಮಾಡಿಸುವುದು ಹೇಗೆ? ಅಭಿಮಾನಿಗಳನ್ನು ದೇವರೆನ್ನುವ ಕಾಲದಿಂದ ಕಚಡಾಗಳೆನ್ನುವ ಕಾಲಕ್ಕೆ ಬಂದು ನಿಂತಿರುವ ಸಂದರ್ಭ ಇಂದಿನದು. ■